ತಲಕಾಡು ಶ್ರೀನಿಧಿ, ಬೆಂಗಳೂರು
ಮತ ಚಲಾವಣೆಯನ್ನು ಮತದಾನ ಎಂದೇಕೆ ಹೇಳುವರು ಗುರುಗಳೆ?



'ಪ್ರತಿಫಲಾಪೇಕ್ಷೆ ಇಲ್ಲದೆ ಕೊಟ್ಟಿದ್ದು ದಾನ' ಎಂಬರ್ಥದಲ್ಲಿ. ಈಗಿನದು ಮತವ್ಯಭಿಚಾರ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
'ನಾನು ಕಚ್ಚಿದರೆ ಏನು ಮಾಡ್ತೀಯಾ?' ಎಂದರೆ ನನ್ನಾಕೆ 'ನಾನು ಕೊಚ್ಚುತ್ತೇನೆ' ಎನ್ನುವುದೇಕೆ?
ನೀವು ಸುಸ್ತಾಗಿ 'ನೆಲ ಕಚ್ಚಿದರೆ' ಅವಳು ಎಳನೀರು ಕೊಚ್ಚಿ ಕೊಡುತ್ತಾಳೆ ಎನ್ನುವುದೇ ಪೂರ್ಣ ಪಾಠ.

ಧನ್ಯತಾ ಎಂ.ಸಿ. ಬೆಂಗಳೂರು
ಕಂಕಣಬಲ ಇದ್ದರೆ ಮಾತ್ರ ಮದುವೆ ಆಗುವುದಂತೆ, ಹೌದೆ?
ಕನ್ಯಾಪಿತೃವಿನ ಜಾತಕದಲ್ಲಿ 'ದಶಮಗ್ರಹಾಗಮನಯೋಗ' ಸಹ ಇರಲೇಬೇಕು.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ಅಮ್ಮನ ಸ್ಪರ್ಶ ಬಿಟ್ಟರೆ ಬೇರೆ ಸ್ಪರ್ಶ ಇಲ್ಲ...?



'ಮಗುವಿನ ಸ್ಪರ್ಶದ ಮುಂದೆ ಬೇರೊಂದಿಲ್ಲ' ಎಂದಳು ಅಮ್ಮ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಇತ್ತೀಚೆಗೆ ನಗರದಲ್ಲಿ ಪಿಂಡ ತಿನ್ನಲು ಕಾಗೆಗಳ ಬದಲು ಪಾರಿವಾಳಗಳು ಬರುತ್ತಿರಲು ಕಾರಣ?
ಕಾಗೆಗಳು ತಮ್ಮ ಫ್ಯಾಮಿಲಿ ಬಿಸಿನೆಸ್ಸನ್ನು ಔಟ್ ಸೋರ್ಸ್ ಮಾಡಿವೆಯಂತೆ.

ಅನಸೂಯ ಟಿ, ಕೇದಿಗೆಮನೆ
ಹಕ್ಕಿಗಳಿಗೆ ರೆಕ್ಕೆ ಇಲ್ಲದೆ ನೆಲದ ಮೇಲೆ ನಡೆದಾಡುವಂತಿದ್ದರೆ?
ಮನುಷ್ಯನಿಗೆ ಹಾರುವ ವಿಷಯವೇ ಹೊಳೆಯದೆ ವಿಮಾನದ ಆವಿಷ್ಕಾರ ಆಗುತ್ತಿರಲಿಲ್ಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಯಾವ ತಪ್ಪನ್ನೂ ಮಾಡದ ಸೀತೆಯನ್ನು ಕಾಡಿಗಟ್ಟಿದ್ದು ತಪ್ಪಲ್ವಾ ಸಾರ್?
ಹುಡುಗ ಹೊಡೆದದ್ದು ಕಣ್ಣು; ಉದುರಿದ್ದು ಹಲ್ಲು! ಕೆಲವೊಮ್ಮೆ ಸಾಮೀಪ್ಯವೇ ದೊಡ್ಡ ತಪ್ಪಾಗುತ್ತದೆ.

ಟಿ. ಜಾಗೃತ, ತುಮಕೂರು
ಸಂಪತ್ತೆಂದರೆ ಅನ್ನ, ನೀರು ಮತ್ತು ಒಳ್ಳೆಯ ಮಾತಂತೆ. ನಿಜವೇ ರಾಮ್?
ಹಾಗಾದರೆ ಹೊಟೇಲಿನ ಮೆನುಕಾರ್ಡ್ ಸಂಪದ್ಭರಿತ! ಇವುಗಳೊಡನೆ ಸ್ವಚ್ಛತೆ, ಸನ್ನಡತೆ ಇದ್ದರಷ್ಟೇ ಸಂಪತ್ತು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ನಮ್ಮ ಎರಡೂ ಕಣ್ಣಿಗೆ ಎರಡು ನೋಟ ಕಂಡಿದ್ದರೆ ಹೇಗಿರುತ್ತಿತ್ತು ಸರ್?
'ಫುಲ್ ಟೈಟ್ ಆಗಿದ್ದಾನೆ' ಎಂದು ಜನ ಆಡಿಕೊಳ್ಳುವುದು ಕೇಳಿಸುತ್ತಿತ್ತು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಪುಸ್ತಕಕ್ಕೆ ಮುನ್ನುಡಿ ಅಥವಾ ಬೆನ್ನುಡಿ ಬರೆಯಲು ಸಂಭಾವನೆ ಕೊಡಬೇಕಾ?
ಪುಸ್ತಕ ಚೆನ್ನಾಗಿದ್ದರೆ ಬೇಡ. ಇಲ್ಲದಿದ್ದರೆ ತಪ್ಪುಕಾಣಿಕೆ ಒಪ್ಪಿಸುವುದು ಸೂಕ್ತ.

ಮಂಡಿ ಕುಮಾರ್, ಬೆಂಗಳೂರು
ನಮ್ಮಲ್ಲಿರುವ ಆತ್ಮಕ್ಕೂ, ಪರಮಾತ್ಮನಲ್ಲಿರುವ ಆತ್ಮಕ್ಕೂ ಏನು ವ್ಯತ್ಯಾಸ?
ಇದು ಚಾಲ್ತಿ ಖಾತೆ. ಅದು ಫಿಕ್ಸೆಡ್ ಡಿಪಾಸಿಟ್.

ದಿನೇಶ್, ಗುಡ್ಡದೂರು
ನಿಮ್ಮನ್ನು ಲಂಚ ನಿರ್ಮೂಲನ ಮಂಡಳಿಯ ಅಧ್ಯಕ್ಷರನ್ನಾಗಿ ಸರ್ಕಾರ ನೇಮಿಸಿದರೆ?
ಕ್ಷಮಿಸಿ. ಅದಕ್ಕೆ ತೆರಬೇಕಾದ ಒಳಲಂಚ ನನ್ನಲ್ಲಿಲ್ಲ.

ಪಿ. ಜಯವಂತ ಪೈ, ಕುಂದಾಪುರ
ನಾಯಿಯ ಬಾಲವನ್ನು ಪೈಪ್ ಹಾಕಿ ನೆಟ್ಟಗೆ ಮಾಡಲು ಸಾಧ್ಯವೆ?
ಸಾಧ್ಯ – ನಾಯಿಯಿಂದ ಬಾಲವನ್ನು ಬೇರ್ಪಡಿಸಿದ ಮೇಲೆ!

## ವಾರದ ಪ್ರಶ್ನೆ

ಆದಿನಾರಾಯಣಮುನಿ, ಕೊಳ್ಳೇಗಾಲ
ಪ್ರಪಂಚದಲ್ಲಿ ಧರ್ಮವೇ ಇಲ್ಲದಿದ್ದರೆ ಏನಾಗುತ್ತಿತ್ತು?
ಧರ್ಮಾವರಂ ಸೀರೆ ಎಂಬ ಐಟಮ್ಮೇ ಇಲ್ಲವಾಗುತ್ತಿತ್ತು.

ಮಲ್ಲಿಕಾರ್ಜುನ, ಸುರಧೇನುಪುರ
ವಿಧಾನಸೌಧಕ್ಕೆ ಹೋಗುವ ವಿಧಾನ ಹೇಳಬಲ್ಲಿರಾ?
ಕತ್ತೆ, ಹಂದಿ, ನಾಯಿ, ಓತಿಕ್ಯಾತಗಳ ಬಾಲ ಹಿಡಿಯುವುದನ್ನು, ಹೊಗಳುವುದನ್ನು ಅಭ್ಯಾಸ ಮಾಡಿ.

ಕೆ. ಪುರುಷೋತ್ತಮ ರೆಡ್ಡಿ, ಪಾವಗಡ
ತಮ್ಮ ಮನೆದೇವರಿಗೆಂದು ಕಂಡವರ ಮನೆಯ ಹೂ ಕಿತ್ತು, ಪುಣ್ಯಪ್ರಾಪ್ತಿ ಬಯಸುವ ಭಕ್ತರ ಬಗ್ಗೆ ಕಾಮೆಂಟು?
ಹೂವನ್ನು ಗುಡಿಗೆ ತಲುಪಿಸಿದ 'ಕೊರಿಯರ್ ಪುಣ್ಯ'ವಷ್ಟೇ ಅವರಿಗೆ ಲಭ್ಯ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ವೈರಿಗಳಿಗೆ ಸರಿಯಾಗಿ ಹೊಡೆಯಬೇಕು. ಹೆಂಡತಿಗೆ?



ಹೆಂಡತಿಗೂ ಸರಿಯಾಗಿ ಹೊಡೆಯಬೇಕು – ಮಸ್ಕಾ, ಪೂಸಿ, ಸಲಾಮ್...

ಡಾ. ಸೀಮಂತಿನಿ ದೇಸಾಯಿ, ಬೆಂಗಳೂರು
ಜಾಣ ಜಾಣೆಯರು ಹೀಗೆ ಒಬ್ಬ ಅತಿ ಜಾಣನನ್ನು ಪ್ರಶ್ನೆ ಕೇಳಿ ಕಾಡುವುದು ಸರಿಯೆ?
ಇಂತಹ ಭಾಷಾ ವಿಷಯ ರಸಾಯನಕ್ಕೆ ಪ್ರಶ್ನೆಗಳ ಮೂಲಕ ಪ್ರಚೋದನೆ ನೀಡದಿದ್ದರೆ ಅಪರಾಧವಾದೀತು.

ಕಾಳೀಹುಂಡಿ ಶಿವಕುಮಾರ್, ಮೈಸೂರು
ನಿಮ್ಮ ಸಾರಥ್ಯದಲ್ಲಿ ಮುಂದಿನ ದಸರಾದಲ್ಲಿ 'ನೀವು ಕೇಳಿದಿರಿ?' ತಂಡ ಪಾಲ್ಗೊಂಡರೆ ಹೇಗೆ?
ಈ ಪ್ರಶ್ನೆಗೆ ದಸರಾ ಸಮಿತಿಯ ಬಳಿ ಉತ್ತರವಿಲ್ಲವಂತೆ.

■ ರಾಮ್